(ಇಂದು ದಿನಾಂಕಃ 04-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

<u>ಮುಂದುವರೆದ ಪಾಟೀ ಸವಾಲು ಶ್ರೀ ಆರ್ ಎಸ ಕೆ ಎದುರುದಾರರ ಪರ ವಕೀಲರುಃ</u>

**1.** ಅಪಘಾತ ನಾನು ನೋಡಿಲ್ಲ ಎಂದರೆ ಸರಿ. ಪೋಲಿಸರಿಗೆ ದೂರು ನಾನು ಕೊಟ್ಟಿರುತ್ತೇನೆ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿದೆ ಎಂದು ಹೇಳುತ್ತಾರೆ. ದೂರಿನಲ್ಲಿ ನನ್ನ ಮಗನ ಡ್ರೈವಿಂಗ ಲೈಸೆನ್ಸ ಇತ್ತು ಅದು ಕಳೆದು ಹೋಗಿದೆ ಎಂದು ಬರೆದಿಲ್ಲ. ನನ್ನ ಮಗನಿಗೆ ಹಿಂದಿನಿಂದ ಗಾಡಿ ಬಂದು ಅಪಘಾತ ಪಡಿಸಿರುತ್ತದೆ. ಮೋಟರ ವಾಹನ ವಿಷಲೇಷನ ವರದಿಯಲ್ಲಿ ಎರಡು ವಾಹನಗಳ ಮುಂದಿನ ಭಾಗ ಜಖಂ ಆಗಿದೆ ಎಂದು ಬರೆದಿದೆ ಎಂದರೆ ಸಾಕ್ಷಿ ಹಿಂದಿನಿಂದ ಗುದ್ದಿದ್ದರಿಂದ ಗಾಡಿ ಮುಂದೆ ಹೋಗಿ ಬಿದ್ದಿದೆ ಎಂದು ಹೇಳುತ್ತಾರೆ. ನನ್ನ ಮಗನ ವಾಹನದ ಹಿಂದಿನ ಭಾಗ ಜಖಂ ಆಗಿಲ್ಲ ಎಂದರೆ ಸರಿ. ಮೋಟರ ವಾಹನ ವಿಷಲೇಷನ ವರದಿಯ ಪ್ರಕಾರ ಎರಡು ವಾಹನಗಳು ಮುಖಾ ಮುಖಿ ಡಿಕ್ಕಿ ಪಡೆಸಿಕೊಂಡಿರುತ್ತವೆ ಎಂದು ತೋರಿಸುತ್ತದೆ ಎಂದರೆ ಸಾಕ್ಷಿ ಹಿಂದಿನಿಂದ ಗುದ್ದಿದ್ದರಿಂದ ಗಾಡಿ ಮುಂದೆ ಹೋಗಿ ಬಿದ್ದಿದೆ ಎಂದು ಹೇಳುತ್ತಾರೆ. ನಕ್ಷೆಯ ಪ್ರಕಾರ ಅಪಘಾತದ ಸ್ಥಳ ಮದ್ಯರಸ್ತೆಯಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಅಪಘಾತ ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳವನ್ನು ನಾನು ನೋಡಿರುತ್ತೇನೆ. ಆ ಸ್ಥಳದಲ್ಲಿ ಅಪಘಾತ ಆದ ನಂತರ ನಾನು ಹೋಗಿ ನೋಡಿದ್ದು ಆ ಸ್ಥಳದಲ್ಲಿ ನಮ್ಮ ವಾಹನ ಇತ್ತು ಎದುರುಗಡೆಯಿಂದ ಬಂದ ಗಾಡಿ ಅಪಘಾತ ಪಡಿಸಿದ ಗಾಡಿ ಇತ್ತಾ ಇಲ್ಲವೊ ಎಂದು ನಾನು ನೋಡಿಲ್ಲ. ಎದುರುಗಡೆಯಿಂದ ಬಂದ ಗಾಡಿಯ ಮೇಲೆ

ಇಬ್ಬರು ಬರುತ್ತಿದ್ದರು. ಆ ವಾಹನದಲ್ಲಿ ಬರುವ ವ್ಯಕ್ತಿಯನ್ನು ನಾನು ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಗಾಡಿಯನ್ನು ನಡೆಸುತ್ತಿರುವ ವ್ಯಕ್ತಿಯನ್ನು ಯಾವಾಗ ನೋಡಿದೆ ಎಂದರೆ ಸಾಕ್ಷಿ ಚಂದಾಪುರದಲ್ಲಿ ಹೋಗುವಾಗ ನಾನು ನೋಡಿದ್ದೆ ಎಂದು ಹೇಳುತ್ತಾರೆ. ಇಂತಹ ವ್ಯಕ್ತಿ ನನ್ನ ಮಗನಿಗೆ ಅಪಘಾತ ಪಡಿಸಿರುತ್ತಾನೆ ಎಂದು ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ. ಅಪಘಾತ ಆಗಿ 15 ದಿನಗಳ ನಂತರ ನಾನು ಚಂದಾಪುರಕ್ಕೆ ಹೋಗಿದ್ದು ನಾನು ಯಾವ ಪೋಲಿಸ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಇನ್ನೊಬ್ಬ ಮಗನ ಕೈ ಮತ್ತು ಕಾಲು ಮುರಿದಿರುತ್ತದೆ. ನನ್ನ ಇನ್ನೊಬ್ಬ ಮಗನ ಕೈ ಮತ್ತು ಕಾಲು ಮುರಿದಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ. ನನ್ನ ಮಗ ಸ್ಥಳದಲ್ಲಿಯೆ ತೀರಿಕೊಂಡಿರುತ್ತಾನೆ. ನನ್ನ ಇನ್ನೊಬ್ಬ ಮಗ ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ. ಸದರಿ ಅಪಘಾತ ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಆ ಗಾಡಿ ನಡೆಸಲು ನನ್ನ ಮಗನ ಹತ್ತಿರ ಲೈಸೆನ್ಸ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಏನು ಕೆಲಸ ಮಾಡುತ್ತಿದ್ದ ಎಂದರೆ ಸಾಕ್ಷಿ ಅವನು ಶಾಲೆ ಕಲಿಯುತ್ತಿದ್ದ ಎಂದು ಹೇಳುತ್ತಾರೆ. ನನ್ನ ಮಗ ಶಾಲೆ ಕಲಿಯುತ್ತಿದ್ದನು ಎಂದು ಬರೆದಿದ್ದೇನೆ ಎಂದರೆ ಸರಿ. ನನ್ನ ಮಗ ಗೌಂಡಿ ಕೆಲಸ ಮಾಡುತ್ತಿದ್ದು ತಿಂಗಳಿಗೆ ರೂ.30,000/- ಸಂಬಳ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ, ಅವನಿಗೆ 22 ವರ್ಷ ವಯಸ್ಸಾಗಿತ್ತು. ನನ್ನ ಮಗ ಶಾಲೆ ಕಲಿಯುತ್ತಿದ್ದನು ಅವನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಆದ್ದರಿಂದ ನಾನು ಮತ್ತು ನನ್ನ ಹೆಂಡತಿ ಅವನ ಆದಾಯದ ಮೇಲೆ ಅವಲಂಬಿತರಾಗಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ

ವಂಶಾವಳಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಕೇಳುತ್ತಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.